ಆರಂಭಿಸಿದ ವೆಂಕಟ ಭಟ್ಟರು ಹತ್ತಾರು ಜಾತಕ ನೋಡಿದರೂ ಉಪಯೋಗವಾಗಲಿಲ್ಲ. ಜಾತಕ ಕೂಡಿ ಬಂದ ಒಂದೆರೆಡು ಹುಡುಗಿಯರಿಗೆ ಕಂಠ ಸರಿಯಿಲ್ಲ, ಸೊಂಟ ಸರಿಯಿಲ್ಲ ಎಂದು ಗೋವಿಂದನ ತಾಯಿ ಮೂಕಮ್ಮ ಅಪಸ್ವರ ಎಳೆದಿದ್ದರಿಂದ ಬೇಸತ್ತ ವೆಂಕಟ ಭಟ್ಟರು ಕಡೆಗೆ ಮನೋಕೂಟ ನೋಡಿ ಮದುವೆ ಮಾಡುವುದೆಂದು ನಿರ್ಧರಿಸಿದರು. ಅದಾಗಲೇ ವಯಸ್ಸು ಬಲಿತಿದ್ದರಿಂದ ಇನ್ನು ಸಿಕ್ಕಿದ ಹುಡುಗಿಯೊಟ್ಟಿಗೆ ಮದುವೆ ಮಾಡಿಸುವುದೆಂದೂ ಅಡುಗೆ ಮಾಡಲಿಕ್ಕೆ ಬಾರದಿದ್ದರೂ ಸೈ ಅಪಸ್ವರ ಹೊಡಕೂಡದು ಎಂಬ ಷರತ್ತನ್ನು ವಿಧಿಸಿ ಹುಡುಗಿ ಮನೆಗೆ ಹೋಗಲಾಯಿತು. ಉದ್ದ ಜಡೆಯ ಹುಡುಗಿ ಪಾನಕ ತಂದಿಟ್ಟಳು. ತುಟಿಯ ಸಂಧಿಯಲ್ಲೆಲ್ಲಾ ನೀರೂರಿಸಿಕೊಂಡ ಗೋವಿಂದ ತಾನು ಮದುವೆಯಾಗುವುದಾದರೆ ಇವಳನ್ನೇ ಎಂದು ಕನಸು ಕಾಣುತ್ತಾ ಕೈ ಕೈ ಹಿಸುಕಿಕೊಂಡು ಪಂಚೆಯ ತುದಿಯನ್ನೆತ್ತಿ ತುಟಿ ಒರೆಸಿಕೊಂಡ. ಕಿಸಕ್ಕನೆ ನಕ್ಕ ಹುಡುಗಿ ಇವನ ಪಕ್ಕದಲ್ಲಿ ಗಂಭೀರವಾಗಿ ಕುಳಿತಿದ್ದ ಗುರುರಾಜನನ್ನು ನೋಡಿ ತನಗೆ ಗುರುರಾಜನೇ ಆಗಬಹುದು ಎಂದು ನಾಚಿ ನುಲಿದು ಅವಳಮ್ಮನ ಕಿವಿಯಲ್ಲಿ ಉಸುರಿದಳು. ಗೋವಿಂದನ ಜನಿವಾರ ಒಬ್ಬಂಟಿಯಾಯ್ತು. ಹಿರಿಮಗನ ಮದುವೆಯಾಗಲಿ ಎಂದು ಕಾದು ಕೂತರೆ ಗುರುರಾಜನಿಗೂ ಇದೇ ಗತಿ ಎಂದೆಣಿಸಿದ ವೆಂಕಟ ಭಟ್ಟರು ಬಯಸದೇ ಬಂದ ಭಾಗ್ಯವನ್ನು ಕೈ ಬಿಡದೇ ಗುರುರಾಜನಿಗೆ ಬಾಸಿಂಗ ಕಟ್ಟಿಸಿದರು. ತನಗೆ ಹುಡುಗಿ ತಪ್ಪಿಹೋಗಿದ್ದಕ್ಕೆ ಸಣ್ಣ ಅಸಮಾಧಾನವನ್ನೂ ವ್ಯಕ್ತಪಡಿಸದ ಗೋವಿಂದ ತಮ್ಮನ ಮದುವೆಗೆ ಬಂದವರಲ್ಲಿ ಒಬ್ಬಳಾದರೂ ಸಿಗಬಹುದೆಂಬ ಹೊಸ ಆಸೆ ಹೊತ್ತು ಕಂಡಕಂಡಲ್ಲೆಲ್ಲಾ ನಿಂತು ಫೋಟೊಗೆ ಪೋಸ್ ಕೊಟ್ಟು, ಬಿಳಿ ಪಂಚೆ ತೊಟ್ಟು ಅತ್ತಿಂದಿತ್ತ ಓಡಾಡಿ, ಮೂರ್ನಾಲ್ಕು ಬಾರಿ ಅಂಗಿ ಬದಲಾಯಿಸಿದ. ಸಮಾಧಾನಕ್ಕೂ ಒಂದು ಹುಡುಗಿ ಇವನತ್ತ ತಿರುಗಿ ನಗಲಿಲ್ಲ. ಮದುವೆಗೆ ಬಂದವರೆಲ್ಲಾ ವಧು ವರರಿಗಿಂತ ಹೆಚ್ಚು ಗೋವಿಂದನ ಕುರಿತು ಕರುಣೆಯ ಮಾತುಗಳನ್ನಾಡಿದರು. ಅದೆಲ್ಲಾ ಕಿವಿಗೆ ಬಿದ್ದರೂ ತಲೆ ಕೆಡಿಸಿಕೊಳ್ಳದ ಗೋವಿಂದ ಖುಷಿಯಿಂದಲೇ ಓಡಾಡಿ, ಬಂದವರೆದುರು ಹಲ್ಲು ಕಿರಿದು ಮಾತನಾಡಿದ. ಗೋವಿಂದ ಎಂದಿನಂತೆ ಇರುವುದನ್ನು ನೋಡಿ ಮೂಕಮ್ಮ ನಿಟ್ಟುಸಿರುಬಿಟ್ಟರು. ಆದರೆ, ಮೂಕಮ್ಮನ ಖುಷಿ ಹೆಚ್ಚು ದಿನ ಉಳಿಯಲಿಲ್ಲ.

ಮದುವೆಯ ಗೌಜು ಗದ್ದಲವೆಲ್ಲಾ ಕಳೆಯುವ ಮುನ್ನವೇ ಒಂದು ದಿನ ಮಧ್ಯಾಹ್ನ ಮನೆ ಎದುರಿನ ಕಟ್ಟೆಯಲ್ಲಿ ಕುಳಿತಿದ್ದ ಗೋವಿಂದ ಕುಸಿದು ಬಿದ್ದ. ಮನೆ ಮಂದಿಯೆಲ್ಲಾ ಗಾಬರಿ ಬಿದ್ದು ಗೋವಿಂದನನ್ನು ಡಾಕ್ಟರ ಬಳಿ ಕರೆದೊಯ್ಯಲು, ಗೋವಿಂದ ಶುಗರ್ ಪೇಷಂಟ್ ಎಂಬ ಅನಿರೀಕ್ಷಿತ ವರದಿ ಕೈ ಸೇರಿತು. ಮದುವೆಯಾಗದ ಮಗನಿಗೆ ಮಧುಮೇಹ ಸುತ್ತಿಕೊಂಡ ಸುದ್ದಿ ಕೇಳಿ ಕಂಗಾಲಾದ ಮೂಕಮ್ಮ ಮನೆ ದೇವರಿಗೊಂದಷ್ಟು ಶಾಪ ಹಾಕಿ ಅತ್ತರು. ಸಾವರಿಸಿಕೊಂಡು ಕೆನ್ನೆ ಬಡಿದುಕೊಂಡು ಮತ್ತದೇ ದೇವರಿಗೆ ಹರಕೆ ಹೊತ್ತರು. ವಾರದ ನಂತರ ಗೋವಿಂದ ಮತ್ತೆ ಡಾಕ್ಟರ ಬಳಿ ಹೋದ, ಬೆನ್ನು ತಟ್ಟಿದ ಡಾಕ್ಟರು ಉದ್ದನೆಯ ಚೀಟಿ ಬರೆದು ಕೊಟ್ಟರು. ಅಂದಿನಿಂದ ಗೋವಿಂದನ ಹಗಲು ರಾತ್ರಿಗೆ ಮಾತ್ರೆ ಜೊತೆಯಾಯಿತು. ಅದೊಂದು ಬದಲಾವಣೆ ಬಿಟ್ಟರೆ ಗೋವಿಂದನ ಜೀವನದಲ್ಲಿ ಬೇರಾವ ಏರಿಳಿತವೂ ಸಂಭವಿಸಲಿಲ್ಲ. ಆದರೆ, ಗೋವಿಂದನ ಮದುವೆ ಹಾಗೂ ಮಧುಮೇಹ ಮೂಕಮ್ಮನ ಚಿಂತೆಯನ್ನು ಮತ್ತಷ್ಟು ಹೆಚ್ಚಿಸುತ್ತಲೇ ಹೋಯ್ತು. ತಮ್ಮ ಕೈ ಕಾಲು ಗಟ್ಟಿಯಿರುವಾಗಲೇ ಗೋವಿಂದನಿಗೊಂದು ಮದುವೆ ಮಾಡಿಸಿ ಸೊಸೆ, ಮೊಮ್ಮಕ್ಕಳನ್ನು ಕಾಣಬೇಕು ಎಂದು ನಿರ್ಧರಿಸಿದ ಮೂಕಮ್ಮ ಹುಡುಗಿ ಹುಡುಕುವಂತೆ ವೆಂಕಟ ಭಟ್ಟರನ್ನು ಪೀಡಿಸಲು ಶುರು ಮಾಡಿದರು. ಗುರುರಾಜನ ಮದುವೆ ಖರ್ಚಿನ ಲೆಕ್ಕದಲ್ಲಾದ ಏರುಪೇರನ್ನು ಸರಿದೂಗಿಸುವ ಚಿಂತೆಯಿಂದಲೇ ಹೊರಬಂದಿರದ ವೆಂಕಟ ಭಟ್ಟರು ಹೆಂಡತಿಯ ಮೇಲೆ ಕೂಗಾಡಿದರು. ಮೂಕಮ್ಮನ ಹರಕೆಯ ಪಟ್ಟಿ ಬೆಳೆಯುತ್ತಾ ಹೋಯಿತು. ಗುರುರಾಜನ ಮದುವೆಯಾಗಿ ಎರಡು ವರ್ಷವಾದರೂ ಗೋವಿಂದನಿಗೆ ಹುಡುಗಿ ಸಿಗದಿದ್ದಾಗ